# ಹೊಸ ಶೇಡ್‌ನಲ್ಲಿ ಹೃತಿಕಾ

**ಬಟ್ಟಲು ಕಂಗಳ ಬೆಡಗಿ ಹೃತಿಕಾ ಶ್ರೀನಿವಾಸ್, ಕನ್ನಡ, ತೆಲುಗು ಸಿನಿಮಾರಂಗಗಳೆರಡರಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಚೆಗೆ 'ಜಾಕಿ 42' ಸಿನಿಮಾ ತಂಡ ಸೇರಿದ್ದು, ತಮ್ಮ ಸಿನಿಮಾಸಕ್ತಿಯನ್ನು ಹಂಚಿಕೊಂಡಿದ್ದಾರೆ.**

**■ ಸುಮಲತಾ ಎನ್.**



ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಹೃತಿಕಾ ಶ್ರೀನಿವಾಸ್ ಅವರಲ್ಲಿ ಸಿನಿಮಾರಂಗದೆಡೆಗೆ ಬರಬೇಕೆಂಬ ಆಸಕ್ತಿ ಚಿಗುರೊಡೆಯಲು ಕಾರಣ, ಅವರ ಕುಟುಂಬ. ಮಗಳನ್ನು ನಟಿಯಾಗಿ ಕಾಣಬೇಕು ಎಂಬ ಅಪ್ಪನ ಆಸೆ ಅವರನ್ನು ಸಿನಿಮಾರಂಗದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಿತ್ತು.

ನಿರ್ದೇಶಕ ಮಹೇಶ್ ಬಾಬು ಅವರ 'ಅಪರೂಪ' ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ ಅವರು, ನಂತರ ತೆಲುಗು ಚಿತ್ರರಂಗದಲ್ಲಿ ಕೂಡ ಅದೃಷ್ಟ ಪರೀಕ್ಷೆಗೆ ಮುಂದಾದರು. ಅತ್ತೆ ಆಮಿನಿ ಕೂಡ ತೆಲುಗು ಸಿನಿಮಾರಂಗದವರೇ ಆಗಿದ್ದು, ತೆಲುಗಿನಲ್ಲಿ 'ಸೌಂಡ್ ಪಾರ್ಟಿ' ಸಿನಿಮಾದಲ್ಲಿ ಅಭಿನಯಿಸಿದರು.

ಕನ್ನಡದಲ್ಲಿ ಉತ್ತಮ ಸ್ಕ್ರಿಪ್ಟ್ ನಿರೀಕ್ಷೆಯಲ್ಲಿದ್ದ ಹೃತಿಕಾಗೆ ಒಲಿದುಬಂದ ಅವಕಾಶ 'ಆರಾಮ್ ಅರವಿಂದ ಸ್ವಾಮಿ'. ನಿರ್ದೇಶಕ ಅಭಿಷೇಕ್ ಶೆಟ್ಟಿಯವರ ಈ ಸಿನಿಮಾದಲ್ಲಿ ಅನಿಶ್ ಹಾಗೂ ಮಿಲನಾ ಜೊತೆ ಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು ಹೃತಿಕಾ.

''ಆರಾಮ್ ಅರವಿಂದ ಸ್ವಾಮಿ' ಚಿತ್ರದಲ್ಲಿ ನನ್ನದು ಮೂಗಿಯ ಪಾತ್ರ, ಡೈಲಾಗ್‌ಗಳೇನೂ ಇರಲಿಲ್ಲ. ದೊಡ್ಡ ಕಾಸ್ಟಿಂಗ್‌ನ ಸಿನಿಮಾ. ಅಭಿಷೇಕ್ ಶೆಟ್ಟಿಯವರು ಸಂಪೂರ್ಣ ಕಥೆ ಹೇಳಿದ ಮೇಲೆ ಈ ಸಿನಿಮಾ ಮಾಡಲೇಬೇಕು ಎನಿಸಿತು. ಆ ಪಾತ್ರ ಸವಾಲು ಎನ್ನಿಸಿತ್ತು. ಇದು ನನ್ನ ಪಾಲಿಗೆ ಒಂದು ಹೊಸ ಪ್ರಯೋಗವಾಗಿತ್ತು'' ಎಂದು ವಿವರಣೆ ನೀಡುತ್ತಾರೆ.

'ಔಟ್ ಆಫ್ ಸಿಲಬಸ್', 'ಗಣಿ ಬಿ.ಕಾಂ. ಪಾಸ್ 2' ಹಾಗೂ 'ಉಡಾಳ' ಸಿನಿಮಾಗಳಲ್ಲಿಯೂ ಅಭಿನಯಿಸುವ ಅವಕಾಶ ಅವರನ್ನು ಹುಡುಕಿಬಂತು.

ಯಾವುದೇ ಪಾತ್ರ ನೋಡುಗರ ಹೃದಯಕ್ಕಿಳಿಯಬೇಕು ಎನ್ನುವುದು ಹೃತಿಕಾ ಅಭಿಲಾಷೆ. ತಮ್ಮ ನಿರೀಕ್ಷೆಯ ಪಾತ್ರದ ಕುರಿತು ಅವರು ಇನ್ನಷ್ಟು ವಿವರಣೆ ನೀಡಿದ್ದು ಹೀಗೆ...

'ಯಾವುದೇ ಪಾತ್ರವಿರಲಿ, ನೋಡುಗರ ಮೇಲೆ ಇಂಪ್ಯಾಕ್ಟ್ ಆಗಬೇಕು. ಆ ಪಾತ್ರ ಅವರ ಹೃದಯದಲ್ಲಿ ಉಳಿದುಬಿಡಬೇಕು. ಅಂಥ ಅವಕಾಶ ಒಬ್ಬ ನಟಿಗೆ ಸಿಗುವುದು ಬಹಳ ಮುಖ್ಯ. ಸಿನಿಮಾದಲ್ಲಿ ಒಂದೇ ದೃಶ್ಯದಲ್ಲಿ ಆ ಪಾತ್ರವಿದ್ದರೂ ಕಥೆಗೆ ಅದು ಬಹಳ ಮುಖ್ಯವಿರಬೇಕು. ಈ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ಪಾತ್ರಗಳನ್ನು ಆಯ್ಕೆ ಮಾಡುತ್ತೇನೆ. ಒಂದೇ ಜಾನರ್‌ಗೆ ಫಿಕ್ಸ್ ಆಗದೇ, ನನ್ನನ್ನು ಒಂದೇ ರೀತಿಯ ಪಾತ್ರದಲ್ಲಿ ತೊಡಗಿಸಿಕೊಳ್ಳದೇ ವೈಬ್ರಂಟ್ ಆಗಿರಬೇಕೆಂದು ಬಯಸುತ್ತೇನೆ. ಯಾವ ರೀತಿ ಕಥೆ, ಪಾತ್ರ ಆಯ್ಕೆ ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ಎಚ್ಚರಿಕೆ ಕೂಡ ಇದೆ' ಎನ್ನುತ್ತಾರೆ.

ಸದ್ಯ ಕಿರಣ್ ರಾಜ್ ನಟನೆಯ 'ಜಾಕಿ 42' ಸಿನಿಮಾ ತಂಡವನ್ನು ಹೃತಿಕಾ ಸೇರಿದ್ದಾರೆ. ''ಜಾಕಿ 42'. ಈ ಸಿನಿಮಾದಲ್ಲಿ ನನ್ನದು ಎರಡು ಶೇಡ್‌ಗಳ ಪಾತ್ರ. ಕಥೆಯಲ್ಲಿ ನನ್ನ ಪಾತ್ರ ವಿಸ್ತರಣೆಯಾಗುತ್ತಾ ಹೋಗುವ ರೀತಿ ನನಗೆ ಬಹಳ ಪರಿಣಾಮಕಾರಿ ಎನಿಸಿತು'' ಎಂದು ವಿವರಿಸುತ್ತಾರೆ.

ಸದ್ಯ ಹೃತಿಕಾ ನಟನೆಯ ತೆಲುಗು ಸಿನಿಮಾವೊಂದು ಬಿಡುಗಡೆಗೆ ಅಣಿಯಾಗಿದ್ದು, ಕನ್ನಡದಲ್ಲಿ ಮತ್ತೊಂದು ಹೊಸ ಸಿನಿಮಾಗೆ ಸಹಿ ಹಾಕಿದ್ದಾರೆ. ■